# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

**S.C.No.146/2022**

CW. 24 PW.18

ಆರೋಪಿಯನ್ನು ತುಮಕೂರಿನ ಬಂದಿಖಾನೆಯಿಂದ ವಿಸಿ ಮುಖೇನ ಹಾಜರುಪಡಿಸಿದ್ದು ನ್ಯಾಯಾಲಯದಲ್ಲಿ ನಡೆಯುತ್ತಿರುವ ಸಾಕ್ಷಿಯ ವಿಚಾರಣೆ ಕೇಳಿಸುತ್ತಿರುವುದಾಗಿ ನುಡಿದಿರುತ್ತಾರೆ.

ದಿನಾಂಕಃ 12-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರುಃ | ಬರ್ಕತ್ ಅಲಿ |
| ತಂದೆಯ ಹೆಸರುಃ | ಹಯತ್ ಖಾನ್ |
| ವಯಸ್ಸುಃ | 40 ವರ್ಷ |
| ವೃತ್ತಿಃ | ಪಿಡಿಓ ನೇರಳೆ ಗುಡ್ಡ ಗ್ರಾಮಪಂಚಾಯತಿ |
| ವಾಸಸ್ಥಳಃ | ಶಿರಾ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ನಾನು 2019 ರಿಂದ ಇಲ್ಲಿಯವರಿಗೆ ನೇರಳೆ ಗುಡ್ಡ ಗ್ರಾಮಪಂಚಾಯತಿಯಲ್ಲಿ ಪಿ ಡಿ ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) 2022 ನೇ ಇಸವಿಯಲ್ಲಿ ಶಿರಾ ಪೊಲೀಸ್ ಠಾಣೆಯಿಂದ ರಾಗ್ಯನಾಯ್ಕ ಬಿನ್ ರಾಮನಾಯ್ಕ ರವರಿಗೆ ಸಂಬಂದಪಟ್ಟ ಸೈಟ್ ಗೆ ಸಂಬಂದಪಟ್ಟ ಖಾತಾ ಎಕ್ಸ್ ಟ್ರನ್ನು ನೀಡುವಂತೆ ಮನವಿ ಸಲ್ಲಿಸಲಾಗಿತ್ತು, ಅದರಂತೆ ನಾನು ಖಾತಾ ಎಕ್ಸ್ ಟ್ರ ನ್ನು ನೀಡಿದ್ದು ಅದರಲ್ಲಿ ಖಾತಾ ನಂ 129 ರಾಗ್ಯ ನಾಯ್ಕ , ರಾಮನಾಯ್ಕ ಎಂಬುವರಿಗೆ ಸೇರಿರುವ ಬಗ್ಗೆ ನಮೂದು ಇರುತ್ತದೆ. ಅದರ ವಿಸ್ತೀರ್ಣ 20 x 20 ಅಳತೆಯಾಗಿತ್ತು. ಸಾಕ್ಷಿ ರಾಮನಾಯ್ಕರವರಿಗೆ ಸಂಬಂದಪಟ್ಟ ತೆರಿಗೆಗಳ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ ಟ್ರನ್ನು

ನೋಡಿ ಗುರುತಿಸಿದ್ದು ಅದನ್ನು ನಿಪಿ-28 ಎಂದು ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

3) ಅದೇ ದಿನ ಮಂಗಲಿಬಾಯಿ ಕೋಂ ಲೇಟ್ ರಾಮನಾಯ್ಕ ರವರಿಗೆ ಸಂಬಂದಪಟ್ಟ ಮನೆ ನಂ.99 ರ ತೆರಿಗೆಗಳ ಡಿಮ್ಯಾಂಡ್ ವಸೂಲಾತಿ ಮತ್ತು ಬಾಕಿ ರಿಜಿಸ್ಟರ್ ನ ಪ್ರತಿಯನ್ನು ಸಹ ನೀಡಿರುತ್ತೇನೆ. ಸಾಕ್ಷಿ ಮಂಗಲಿಬಾಯಿರವರಿಗೆ ಸಂಬಂದಪಟ್ಟ ತೆರಿಗೆಗಳ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ ಟ್ರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29 (ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಸಿಡಿಸಿ ವಕೀಲರಿಂದ</u>**

4)ನಿಪಿ-28 ರಲ್ಲಿ ಪೂರ್ತಿಯಾಗಿ ನಿವೇಶನವೆಂದು ಬರೆದಿಲ್ಲ ಅಂದರೆ ಸಾಕ್ಷಿಯು ಕ್ರಮ ಸಂಖ್ಯೆ ಕಾಲಂ 2 ರಲ್ಲಿ ನಿ ಎಂದು ಬರೆದಿರುತ್ತೇನೆ, ಅದರ ಅರ್ಥ ನಿವೇಶನವೆಂದು. ಕಾಲಂ ನಂ.2 ಅಸೆಸ್ ಮೆಂಟ್ ಸಂಖ್ಯೆ ಅಂದರೆ ಸರಿ.

5)ನಿಪಿ-29 ರಲ್ಲಿ ಪೂರ್ತಿಯಾಗಿ ಮನೆ ಎಂದು ಬರೆದಿಲ್ಲ ಅಂದರೆ ಸಾಕ್ಷಿಯು ಕ್ರಮ ಸಂಖ್ಯೆ ಕಾಲಂ 2 ರಲ್ಲಿ ಮ ಎಂದು ಬರೆದಿರುತ್ತೇನೆ, ಅದರ ಅರ್ಥ ಮನೆಯೆಂದು. ಕಾಲಂ ನಂ.2 ಅಸೆಸ್ ಮೆಂಟ್ ಸಂಖ್ಯೆ ಅಂದರೆ ಸರಿ. ನಿಪಿ-28 ಮತ್ತು ನಿಪಿ-29 ತೆರಿಗೆ ಡಿಮ್ಯಾಂಡ್ ಎಕ್ಸ್ ಟ್ರ ಅಂದರೆ ಸರಿ . ಖಾತಾ ಎಕ್ಸ್ ಟ್ರ ಅಲ್ಲ ಅಂದರೆ ಸರಿ. ಪೊಲೀಸರು ಲಿಖಿತ ಮನವಿ ಕೊಟ್ಟಿದ್ದರು.

2 ನೇ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು , 2 ನೇ ಆರೋಪಿಯ ಕೋರಿಕೆಯ ಮೇರೆಗೆ 1 ನೇ ಆರೋಪಿಯ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿದ್ದು , 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.